**ಸಾಕ್ಷಿಗೆ ದಿನಾಂಕಃ19-08-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: 1 ನೇ ಪ್ರತಿವಾದಿ ಪರ ಶ್ರೀ. SNR ವಕೀಲರಿಂದ ::**

ನನ್ನ ಸ್ವಂತ ಊರು ತರೀಕೆರೆ ಆಗಿರುತ್ತದೆ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಏನೆಲ್ಲಾ ವಿಚಾರಗಳು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಕಾರಣ ನನಗೆ ಅಷ್ಟಾಗಿ ಓದಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರವನ್ನು ಯಾರು ಹೇಳಿ ಬರೆಸಿರುತ್ತಾರೆಂದು ನನಗೆ ಗೊತ್ತಿಲ್ಲ.

ವಾದಿಯು ಈ ಪ್ರಕರಣವನ್ನು ಹೂಡಿರುವ ವಿಚಾರ ನನಗೆ ಗೊತ್ತಿಲ್ಲ. ಈ ಪ್ರಕರಣವನ್ನು ವಾದಿ ಯಾರ ವಿರುದ್ದ ಹೂಡಿರುತ್ತಾರೆಂದು ನನಗೆ ಗೊತ್ತಿಲ್ಲ. ವಾದಿಯ ನಿವೇಶನದ ದಕ್ಷಿಣಕ್ಕೆ ಲಲಿತಮ್ಮ ರವರ ನಿವೇಶನ ಇರುತ್ತದೆ. ಸದರಿ ಆಸ್ತಿಯ ಉತ್ತರಕ್ಕೆ ಈಶ್ವರಪ್ಪ ರವರ ನಿವೇಶನ ಇರುತ್ತದೆ ಎಂದರೆ ಸರಿ. ನಾನು ವಾದಿಯ ನಿವೇಶನದಲ್ಲಿ ಒಂದು ಗ್ಯಾರೆಜ್ ಅನ್ನು ಹಾಕಿಕೊಂಡಿರುತ್ತೇನೆ. ಈಶ್ವರಪ್ಪ ರವರು ಅವರ ಆಸ್ತಿಯನ್ನು ಕ್ರಯದ ಅಡಿ 2018 ರಲ್ಲಿ ಖರೀದಿ ಮಾಡಿರುತ್ತಾರೆ. ನಾನು ಸಹ 2018 ನೇ ಸಾಲಿನಲ್ಲಿಯೇ ಅವರ ನಿವೇಶನದಲ್ಲಿ ಗ್ರಾರೆಜ್ ಅನ್ನು ಹಾಕಿಕೊಂಡಿರುತ್ತೇನೆ. 1 ನೇ ಪ್ರತಿವಾದಿಯ ಪರಿಚಯ ನನಗೆ ಸಣ್ಣ ವಯಸ್ಸಿನಿಂದ ಇರುತ್ತದೆ. ಬಿ ಹೆಚ್ ರಸ್ತೆಯ ದಕ್ಷಿಣಕ್ಕೆ ಯಾವ ಸರ್ವೇ ನಂಬರ್ ಆಸ್ತಿಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಬರ್ 80/2 ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ವಾದಿ ಹಾಗೂ ಪ್ರತಿವಾದಿಗಳ ನಡುವೆ ಯಾವ ವ್ಯಾಜ್ಯ ಇರುತ್ತದೆ ಎಂದು ನನಗೆ ಗೊತ್ತಿಲ್ಲ.

**:: ಪಾಟೀ ಸವಾಲು :: 2d ನೇ ಪ್ರತಿವಾದಿ ಪರ ಶ್ರೀ. TDA ವಕೀಲರಿಂದ ::**

1 ನೇ ಪ್ರತಿವಾದಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರುತ್ತಾರೆ.

**(2 ಎ ರಿಂದ ಸಿ ಪ್ರತಿವಾದಿಗಳು ಏಕ ಪಕ್ಷೀಯವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: